**ಒ.ಎಸ್.ನಂಬ್ರ: 128/2015 ಪಿ .ಡಬ್ಲ್ಯೂ : 1**

ದಿನಾಂಕ: 20-02-2024 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣೀಕರಿಸಲಾಯಿತು

**ಮುಂದುವರಿದ ಪಾಟಿ ಸವಾಲು: 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ. ಎಂ.ಜೆ.ಎಸ್ ವಕೀಲರಿಂದ**

ನಿಪಿ-1 ರ ಪ್ರಕಾರ ಹಕ್ಕುದಾರರು ಸ್ವಾಧೀನತೆಯನ್ನು ಅನುಭವಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ಅದರಂತೆ ಪ್ರತಿ ಹಕ್ಕುದಾರರು ಅವರ ಭಾಗವನ್ನು ಅಭಿವೃದ್ದಿಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ನಿಪಿ 1 ನ್ನು ಫೌಲ್ ಅಬ್ರಮ್ ರವರು ಪ್ರಶ್ನಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ .ಫೌಲ್ ಅಬ್ರಮ್ ರವರಿಗೆ ನನ್ನ ಕ್ರಯದಾರರಾದ ಅಚ್ಚುತ ಪೈ ರವರು ಸ್ವತ್ತುಗಳನ್ನು ಮಾರಾಟ ಮಾಡಿದ್ದು ಎಂದು ಆತ ಸಾಧಿಸಿದ್ದರು ಎಂದರೆ ನನಗೆ ಗೊತ್ತಿಲ್ಲ . RA No. 15/2015 ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. FDP 09/2011 ರ ಆದೇಶ ಪುಟಗಳನ್ನು ಸಾಕ್ಷಿಗೆ ತೋರಿಸಿದ್ದು ಓದಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ-1 ಪ್ರಕರಣದ ಎದುರುದಾರರು ಸಾಕಷ್ಟು ಆಕ್ಷೇಪಣೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ . ಆದರೂ ನ್ಯಾಯಾಲಯ ಆಕ್ಷೇಪಣೆಯನ್ನು ನಿರ್ಲಕ್ಷಿಸಿ ಅಂತಿಮ ಆದೇಶ ಹೊರಡಿಸಿತ್ತು ಎಂದರೆ ನನಗೆ ಗೊತ್ತಿಲ್ಲ . ಆದ ಕಾರಣ ಎದುರುದಾರರ ಪಿತೂರಿಯಂತೆ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ನಿಪಿ 8 ನ್ನು ಜಾರಿಗೆ ತರಲು ಪ್ರಯತ್ನಿಸಲಿಲ್ಲ . OS 730/1990 ರ ಆದೇಶದ ಪ್ರಕಾರ FDP 05/2009 ರಂತೆ ಅಂತಿಮ ಡಿಕ್ರಿ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ದಿ: 27-01-2011 ರಂದು ಆದೇಶ ಮಾಡಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶ ಆಯುಕ್ತರ ವರದಿ ಆದಾರದ ಮೇಲೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಅದರಂತೆ ದಿನೇಶ್ ಪೈ ರವರು ತಮ್ಮ ಹಕ್ಕಿನ ಅನುಭವದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ . ಸದರಿ ಸ್ವತ್ತನ್ನು ಕ್ರಯ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ಅಚ್ಚುತ ಪೈ ರವರಿಗೆ OS 730/1990 ರ ಡಿಕ್ರಿಯ ಪ್ರಕಾರ ನನ್ನ ಕ್ರಯದಾರರಿಗೆ ಅವಿಭಾಜಿತ ಹಕ್ಕು ಇದ್ದ ಬಗ್ಗೆ ನನಗೆ ತಿಳಿದಿಲ್ಲ . ಸದರಿ ಹಕ್ಕು ಅವಿಭಾಜಿತ ಹಕ್ಕು ಅಥವಾ ಸಂಪೂರ್ಣ ಹಕ್ಕಾ ಎಂದು ನನಗೆ ತಿಳಿದಿಲ್ಲ . ಸದರಿ ಡಿಕ್ರಿಯ ಪ್ರಕಾರ ಅಚ್ಚುತ ಪೈ ಅವಿಭಾಜಿತ ಹಕ್ಕುದಾರರು ಎಂದರೆ ನನಗೆ ಗೊತ್ತಿಲ್ಲ . ಸದರಿ ಆದೇಶ ಅಂತಿಮಗೊಂಡಿದ್ದು ನಾನು ಪ್ರಶ್ನಿಸಿಲ್ಲ ಎಂದರೆ ಸರಿ . ಸದರಿ ಅವಿಭಾಜಿತ ಹಕ್ಕನ್ನು ಪ್ರಶ್ನಿಸಲು ಯಾವುದೇ ಕ್ರಮ ತೆಗೆದುಕೊಂಡಿಲ್ಲ . ನಿಪಿ 1 ನ್ಯಾಯ ಸಮ್ಮತವಾದ ದಾಖಲೆ ಎಂದರೆ ನನಗೆ ಗೊತ್ತಿಲ್ಲ . ಅದನ್ನು ಪ್ರಶ್ನಿಸಲು ನಮಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ . ಅನ್ಯರ ಪ್ರಚೋದನೆ ಮೇರೆಗೆ ಈ ದಾವೆ ಸಲ್ಲಿಸಿದ್ದು ಕೋರಿರುವ ನಿವೃತ್ತಿ ಊರ್ಜಿತವಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**